ಇ) ಮಹಾರಾಷ್ಟ್ರ ಸರ್ಕಾರವು ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್‌ಗೆ ಹೋಗಿದ್ದು, ಅದಕ್ಕೆ ಸಂಬಂಧಿಸಿದಂತೆ ಸಮರ್ಥ ಉತ್ತರವನ್ನು (ಹಲ ವಿಚಾರಗಳೊಂದಿಗೆ) ರಾಜ್ಯ ಸರ್ಕಾರ ಮಂಡಿಸಿದೆಯೇ ?

ಈ) ಸದರಿ ವಿಷಯವನ್ನು ಸುಪ್ರೀಂ ಕೋರ್ಟ್ ವಿಚಾರಣೆಗೆ ಅಂಗೀಕರಿಸಿದಲ್ಲಿ ಸರ್ಕಾರದ ನಿಲುವು ಮತ್ತು ಕಾರ್ಯತಂತ್ರಗಳೇನು?

ಉ) ಗಡಿ ಸಮಸ್ಯೆ ನಿವಾರಣೆಯನ್ನು ಸಮರ್ಥವಾಗಿ ನಿರ್ವಹಿಸಲು ಅನುಸರಿಸುವ ಕ್ರಮಗಳ ಬಗ್ಗೆ ಸರ್ಕಾರಕ್ಕೆ ಅವಶ್ಯಕ ಮಾಹಿತಿ ಲಭ್ಯವಿದೆಯೇ (ವಿವರ ನೀಡುವುದು) ?

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಮಹಾರಾಷ್ಟ್ರ ಸರ್ಕಾರವು ಈ ವಿಷಯದಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿ ಒಂದು ದಾವೆಯನ್ನು ಹೂಡಿರುತ್ತದೆ. ಈ ಸಂಬಂಧ ಸುಧೀರ್ಘವಾದ ಅಕ್ಷೇಪಣಾ ಪತ್ರವನ್ನು ರಾಜ್ಯ ಸರ್ಕಾರ ನ್ಯಾಯಾಲಯದಲ್ಲಿ ದಾಖಲೆ ಮಾಡಿರುತ್ತದೆ ಹಾಗೂ ಶ್ರೀ ಹೆಚ್.ಬಿ.ದಾತಾರ್, ಹಿರಿಯ ನ್ಯಾಯವಾದಿಗಳು ಇವರ ಅಧ್ಯಕ್ಷತೆಯಲ್ಲಿ ಒಂದು ವಿಶೇಷ ಕಾನೂನು ಸಲಹಾ ಸಮಿತಿಯನ್ನು ರಚಿಸಿರುವುದಲ್ಲದೆ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಉನ್ನತ ಮಟ್ಟದ ಸಮಿತಿಯನ್ನು ರಚನೆ ಮಾಡಲಾಗಿದೆ. ಇದಲ್ಲದೆ, ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಲಾಗಿದೆ.

ಆ) ಇಲ್ಲ

ಇ) ಹೌದು

ಈ) ಮಹಾರಾಷ್ಟ್ರ ಸರ್ಕಾರವು ಸಲ್ಲಿಸಿರುವ ದಾವೆಯನ್ನು ತಳ್ಳಿಹಾಕುವಂತೆ ಮತ್ತು ಮ್ಯಾಜನ್ ಆಯೋಗದ ವರದಿಯನ್ನು ಅನುಷ್ಠಾನಕ್ಕೆ ತರುವಂತೆ ಸರ್ವೋಚ್ಚ ನ್ಯಾಯಾಲಯದ ಮುಂದೆ ವಾದ ಮಂಡಿಸಲಾಗುವುದು.

ಉ) ರಾಜ್ಯದ ಪರವಾಗಿ ವಾದಿಸಲು ಹಿರಿಯ ನ್ಯಾಯವಾದಿಗಳನ್ನು ನೇಮಿಸಲಾಗಿದೆ. ಅಗತ್ಯವಿರುವ ಮಾಹಿತಿಯನ್ನು ವಿಶೇಷ ಕಾನೂನು ಸಲಹಾ ಸಮಿತಿಯು ಸಂಗ್ರಹಿಸಿ, ಕ್ರೋಡೀಕರಿಸಿ ಒದಗಿಸುತ್ತಿದೆ.

1051(1480) ಶ್ರೀ ಶಿವಾನಂದ ಪಾಟೀಲ್(ಬಸವನ ಬಾಗೇವಾಡಿ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ರೈತರಿಗೆ ಭೂ ಪರಿಹಾರಕ್ಕಾಗಿ ನೀಡಬೇಕಾದ ಬಾಕಿ ಹಣ ಎಷ್ಟು;

ಆ) ರೈತರಿಗೆ ಭೂ ಪರಿಹಾರವನ್ನು ನೀಡದೇ ಇರುವುದಕ್ಕೆ ಕಾರಣಗಳೇನು;

ಇ) ಇಲಾಖೆಯಲ್ಲಿ ಇಂತಹ ಎಷ್ಟು ಪ್ರಕರಣಗಳು ಬಾಕಿ ಇವೆ;

ಈ) ಸದರಿ ಪರಿಹಾರದ ಬಾಕಿ ಹಣವನ್ನು ನೀಡಲು ಸರ್ಕಾರವು ಕೈಗೊಂಡಿರುವ ಕ್ರಮವೇನು;

ಉ) ಭೂ ಪರಿಹಾರದ ಬಾಕಿ ಹಣವನ್ನು ರೈತರಿಗೆ ನೀಡಲು ಸರ್ಕಾರವು ನಿರ್ದಿಷ್ಟ ಕಾಲಮಿತಿಯನ್ನೇನಾದರೂ ನಿಗದಿಪಡಿಸಿರುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) 1. ಬಿಜಾಪುರ ರೂ. 3,92,10,954

2. ಬಾಗಲಕೋಟೆ ರೂ. 1,28,67,465

ಒಟ್ಟು ರೂ. 5,20,78,419 ಗಳ ಬಾಕಿ ಭೂ ಪರಿಹಾರ ಧನ ಪಾವತಿಸಬೇಕಾಗಿದೆ.

ಆ) ಅನುದಾನದ ಕೊರತೆಯಿಂದ ಭೂ ಪರಿಹಾರ ಧನ ಪಾವತಿಸಲು ಸಾಧ್ಯವಾಗಿಲ್ಲ.

ಇ) 468 ಪ್ರಕರಣಗಳು.

ಈ) ಬಾಕಿ ಇರುವ ಪ್ರಕರಣಗಳ ಬಗ್ಗೆ ವಿವರಗಳನ್ನು ಸಂಬಂಧಪಟ್ಟ ಜಿಲ್ಲೆಗಳಿಂದ ಪಡೆದು ಅದಕ್ಕೆ ಬೇಕಾಗುವ ಅನುದಾನ ಪಡೆಯಲು ಪ್ರಯತ್ನಿಸಲಾಗುತ್ತದೆ.

ಉ) ಇಲ್ಲ.

1484 ಶ್ರೀ ಶಿವಾನಂದ ಪಾಟೀಲ್ (ಬಸವನ ಬಾಗೇವಾಡಿ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಆಸಿಡ್ ಎರಚುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರಾಜ್ಯದಲ್ಲಿ ಇಂತಹ ಎಷ್ಟು ಪ್ರಕರಣಗಳು ದಾಖಲಾಗಿವೆ(ವಿವರ ನೀಡುವುದು);

ಇ) ಎಷ್ಟು ಪ್ರಕರಣಗಳಲ್ಲಿ ತಪ್ಪಿತಸ್ಥರ ಮೇಲೆ ಸರ್ಕಾರವು ಕಾನೂನು ಕ್ರಮ ಕೈಗೊಂಡಿದೆ;

ಈ) ಆಸಿಡ್ ಧಾಳಿಗೆ ತುತ್ತಾಗಿರುವ ಅಮಾಯಕರಿಗೆ ಸರ್ಕಾರದಿಂದ ಪರಿಹಾರ ಕಲ್ಪಿಸಲಾಗಿದೆಯೇ;

ಉ) ಈ ರೀತಿಯ ಪ್ರಕರಣಗಳು ರಾಜ್ಯದಲ್ಲಿ ಮರುಕಳಿಸದಂತೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಹೌದು

ಆ) ಕಳೆದ 3 ವರ್ಷದಲ್ಲಿ 48 ಪ್ರಕರಣಗಳು ದಾಖಲಾಗಿವೆ. ವಿವರ ಈ ಕೆಳಕಂಡಂತಿದೆ.

2002	2003	2004
16	17	15

ಇ) 2002ರಲ್ಲಿ ದಾಖಲಾದ 16 ಪ್ರಕರಣಗಳಲ್ಲಿ 10 ಪ್ರಕರಣಗಳು ನ್ಯಾಯಾಲಯದ ವಿಚಾರಣೆಯಲ್ಲಿದ್ದು, 4 ಪ್ರಕರಣಗಳು ಖುಲಾಸೆಯಾಗಿರುತ್ತವೆ. 1 ಪ್ರಕರಣ ಪತ್ತೆಯಾಗಿರುವುದಿಲ್ಲ ಮತ್ತು ಒಂದು ಪ್ರಕರಣದಲ್ಲಿ ಆರೋಪಿ ಮೃತನಾಗಿರುವುದರಿಂದ ಅಬೇಟೆಡ್ ಚಾರ್ಜ್ ಶೀಟ್ ಸಲ್ಲಿಸಿದೆ.

2003ರಲ್ಲಿ ದಾಖಲಾದ 17 ಪ್ರಕರಣದಲ್ಲಿ 11 ಪ್ರಕರಣಗಳು ನ್ಯಾಯಲಾಯದ ವಿಚಾರಣೆಯಲ್ಲಿದ್ದು, 1 ಪ್ರಕರಣ ಖುಲಾಸೆಯಾಗಿದ್ದು, 2 ಪ್ರಕರಣದಲ್ಲಿ ಶಿಕ್ಷೆಯಾಗಿದ್ದು 3 ಪ್ರಕರಣಗಳು ಪತ್ತೆಯಗಿರುವುದಿಲ್ಲ.